Patients treated in the Bangalore hospitals a month before revising the fees.

Q.—344. Sri A. V. NARASIMHA REDDY (Bangalore South).—

Will the Government be pleased to state :—

(*a*) the number of patients treated in hospitals of Bangalore during the month of January 1953 ;

(*b*) the number of patients treated by them a month before revising the fees (the names of hospitals and their respective numbers may kindly be furnished) ?

A.—Sri T. CHANNIAH (Minister for Public Health and Local Self-Government).—

Statement appended below :—

Statement showing the number of patients treated in hospitals of Bangalore during the month of January 1953 and also December 1952.

	Name of the Institution	*January 1953*		*December 1952*	
		In-patients	*Out-patients*	*In-patients*	*Out-patients*
1	Victoria Hospital, Bangalore ..	19,963	16,200	20,800	18,053
2	Bowring and Lady Curzon Hospitals, Bangalore.	1,406	8,707	1,329	7,276
3	Isolation Hospital, Magadi Road, Bangalore.	106	410	108	434
4	Mental Hospital, Bangalore ..	59	174	73	196
5	Isolation Hospital, Civil Station Bangalore.	86	248	85	273
6	Santha Bai Deva Rao Shivaram Sanatorium, Bangalore.	10	131	15	175
7	Tuberculosis Sanatorium, Civil Station, Bangalore.	17	78	10	*
8	Minto Ophthalmic Hospital, Bangalore.	220	4,751	181	8,015
9	Vani Vilas Hospital, Bangalore ..	1,665	7,012	1,736	8,173

*No out-patients were treated in the Tuberculosis Sanatorium, Civil Station, Bangalore, during the month of December 1952.

ಶ್ರೀ ಎ. ವಿ. ನರಸಿಂಹರೆಡ್ಡಿ.—ತಾವು 18ನೆಯಪುಟದಲ್ಲಿ ಪರಿಶಿಷ್ಟದಲ್ಲಿ ತೋರಿಸಿರುವ ಇನ್‌ಪೇಷೆಂಟ್ಸ್ ಮತ್ತು ಔಟ್ ಪೇಷೆಂಟ್ಸ್ ಸಂಖ್ಯೆ ಜನವರಿ ತಿಂಗಳಲ್ಲಿ ಬಹಳ ಕಮ್ಮಿಯಾಗಿದೆ ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅಲ್ಲಿ ಕೊಟ್ಟಿರತಕ್ಕ ಅಂಕಿಗಳಿಂದಲೇ ಅಷ್ಟು ಕಮ್ಮಿಯಾಗಿಲ್ಲವೆಂಬುದು ಕಂಡುಬರುತ್ತಿಲ್ಲವೇ ?

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಾಗೆ ಬರುತ್ತಿದ್ದ ಪೇಷೆಂಟ್ಸ್‌ಗಳಲ್ಲಿ ಹಳ್ಳಿಯ ಜನರೇ ಜಾಸ್ತಿಯಾಗಿದ್ದರಲ್ಲವೇ ?

ಶ್ರೀ ಟಿ. ಚೆನ್ನಯ್ಯ.—ಹಳ್ಳಿಯವರೂ ಇದ್ದಾರೆ. ಪಟ್ಟಣದವರೂ ಇದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಂದಾಣೆ ಫೀಜು ಕೊಡುವುದನ್ನು ಈಗ ಟೌನುಗಳಲ್ಲಿ ಇನ್ನೂ ತೆಗೆದಿಲ್ಲ ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಲ್ಲಾ ಪಟ್ಟಣಗಳಲ್ಲೂ ಕೂಡ ತೆಗೆದಿದೆಯೇ ?

ಶ್ರೀ ಟಿ. ಚೆನ್ನಯ್ಯ.—ಹೌದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇಲ್ಲಿ ಕೊಟ್ಟಿರುವ ಉತ್ತರದಲ್ಲಿ ಜನವರಿಯಲ್ಲಿ in-patient ಗಳು 19,663 ಎಂದೂ, ಡಿಸೆಂಬರ್ ತಿಂಗಳಲ್ಲಿ 20,800 ಎಂದೂ ಹೇಳಿದ್ದೀರಿ. ಅಂದರೆ ಒಂದು ಸಾವಿರ ಹೆಚ್ಚು ಕಡಮೆಯಾಯಿತು. ಇದನ್ನು ನೋಡಿದರೆ, ಆ ಆಸ್ಪತ್ರೆಗೆ ಬರುತ್ತಿದ್ದ ರೋಗಿಗಳ ಸಂಖ್ಯೆ ಇಳಿಯಿತು ಎಂದು ಗೊತ್ತಾಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಜನವರಿಯಲ್ಲಿ 19,663 ಜನ ಡಿಸೆಂಬರಿನಲ್ಲಿ ಇನ್ನೂ ಸ್ವಲ್ಪ ಹೆಚ್ಚಾಗಿ ಇದ್ದರೆಂದು ಭಾವಿಸಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬಡವರಿಗೆ ಫೀಜು ಕೊಡುವುದಕ್ಕೆ ಚೈತನ್ಯವಿಲ್ಲದೆಹೋಗಿ ಹೀಗೆ ಸಂಖ್ಯೆ ಕಡಮೆಯಾಗಿದೆಯೆಂಬುದು ಸರ್ಕಾರದವರಿಗೆ ಗೊತ್ತಾಗಿದೆಯೇ ?

ಶ್ರೀ ಟಿ. ಚನ್ನಯ್ಯ.—ಈಚೆಗೆ 3ನೆಯ ತಾರೀಖಿನಿಂದ out-patients ಗಳಿಗೆ ವಿಧಿಸುತ್ತಿದ್ದ ಫೀಜನ್ನು ಪೂರ್ತಿ ವಜಾಮಾಡಲಾಗಿದೆ ಮತ್ತು admission fee, ward-charges ಮುಂತಾದುವುಗಳನ್ನು ಸಹ ಕಡಮೆ ಮಾಡಿದೆ. ತಾವು ದಯವಿಟ್ಟು ಸರ್ಕಾರಿ ಆಜ್ಞೆಯನ್ನು ನೋಡಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಚೆಗೆ ತಾವು ಸರ್ಕಾರಿ ಹುಕುಂ ಹೊರಡಿಸಿರುವುದರ ಪ್ರಕಾರ ಪಟ್ಟಣಗಳಲ್ಲಿ ತಕ್ಕ ಆಸ್ಪತ್ರೆಗಳಿಗೂ ಹಳ್ಳಿಗಳ ಕಡೆ ಇರತಕ್ಕ ಆಸ್ಪತ್ರೆಗಳಿಗೂ ಏನಾದರೂ ವ್ಯತ್ಯಾಸಮಾಡಿ ಹೊರಡಿಸಿದ್ದೀರಾ? ಈಗಿನ ಆರ್ಡರ್ ಪ್ರಕಾರ ಸಣ್ಣಸಣ್ಣ ಟೌನ್ ಪ್ರದೇಶಗಳಿಗೆ ಏನೂ ಉಪಯೋಗವಾಗುತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚೆನ್ನಯ್ಯ.—ಅದು ಅಭಿಪ್ರಾಯದ ಮಾತು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಚೆಗೇನಾದರೂ ಈ ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಿದೆಯೇ ಅಥವಾ ಕಡಮೆಯಾಗಿದೆಯೇ ಎಂಬ ಬಗ್ಗೆ ತಖ್ತೆಯನ್ನೇನಾದರೂ ಮಾಡಿದ್ದಿರಾ? 10,000 ಪ್ರಜಾಸಂಖ್ಯೆಯೊಳಗಿರುವ ಸಣ್ಣಸಣ್ಣ ಟೌನುಗಳಲ್ಲಿರುವ ಆಸ್ಪತ್ರೆಗಳ ಬಗ್ಗೆ ಅಂಥ ತಖ್ತೆಯನ್ನು ಕೊಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಆ ರೀತಿ ತಖ್ತೆ ತಯಾರು ಮಾಡಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹಳ್ಳಿಯ ಕಡೆಯಿರುವ ಆಸ್ಪತ್ರೆಗಳಲ್ಲಿ ಮೊದಲಿದ್ದಹಾಗೆಯೇ ದರಗಳನ್ನು ಗೊತ್ತುಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ತಾರೀಖು 3-3-1953ನೇ ಹುಕ್ಕುಮನ್ನು ಹೊರಡಿಸಿದಾಗ ಈ ಅಂಶಗಳೆಲ್ಲಾ ನರಾರದವರ ಗಮನದಲ್ಲಿದ್ದವು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಸಣ್ಣಸಣ್ಣ ಟೌನುಗಳಿಂದ ದೂರು ಬರುತ್ತಿದೆ, ಈಗಿನ ಆಜ್ಞೆಯಿಂದ ಬಡವರುಗಳಿಗೆ ಬಹಳ ತೊಂದರೆಯಾಗಿದೆ ಎಂದು. ಆದ್ದರಿಂದ minor town ಗಳ ವಿಷಯದಲ್ಲಿ ದರಗಳನ್ನು ಕಡಮೆಮಾಡುತ್ತೀರಾ?

Sri T. CHANNIAH.—Fee that was being levied on out-patients has been abolished as per Government Order dated 3rd March 1953, in all hospitals in the State. Admission Fee of Re. 1 which was being collected from persons seeking admission towards in the Local Fund and Government Institutions has also been done away with.

ಶ್ರೀ ಎಸ್. ಗೋಪಾಲಗೌಡ.—ಈಚೆಗೆ ಆಸ್ಪತ್ರೆಗಳಲ್ಲಿ ಖಾಯಿಲೆಯವರಿಗೆ ಕೊಡುತ್ತಿದ್ದ ಹಾಲು, ಬೆಣ್ಣೆ ಮುಂತಾದ ವಸ್ತುಗಳನ್ನು 18ನೆಯ ತಾರೀಖಿನಿಂದೀಚೆಗೆ ಕಡಿಮೆಮಾಡಿದ್ದೀರಾ?

ಶ್ರೀ ಟಿ. ಚನ್ನಯ್ಯ.—Basic diet ಗೊತ್ತುಮಾಡಿದ್ದಾರೆ, ಅದರಂತೆ ಕೊಡುತ್ತಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.— ದರಂತೆ ಪ್ರತಿಯೊಬ್ಬರೂ ಆಹಾರ ಪಡೆಯಬೇಕಾದರೆ ಒಂದು ಸರ್ಟಿಫಿಕೇಟ್ ಬೇಕಲ್ಲವೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಟ್ಯೂಬರ್‌ಕ್ಯುಲೋಸಿಸ್ ಆಸ್ಪತ್ರೆಯಿಂದ ಮುನಿಯಪ್ಪ ಎಂಬವನು ತಮಗೊಂದು ಪತ್ರ ಬರೆದು ಇತ್ತೀಚೆಗೆ ಈ ರೀತಿ ಆಹಾರವನ್ನು Restrict ಮಾಡಿದ್ದಾರೆಂದು ತಿಳಿಸಿದ್ದಾರೆಯೇ?

ಶ್ರೀ ಟಿ. ಚೆನ್ನಯ್ಯ.—ನಮಗೆ ಪತ್ರಬಂದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಈ ರೀತಿ ಆಹಾರ ಕಡಮೆಮಾಡಿಲ್ಲವೆಂದು ತಾವು ಹೇಳುತ್ತೀರಾ?

ಅಧ್ಯಕ್ಷರು.—ಉತ್ತರ ಹೇಳಿದರು.

ಶ್ರೀ ಎಸ್. ಗೋಪಾಲಗೌಡ.—ಅವರು ಆ ಆಸ್ಪತ್ರೆಯ ಸಂಬಂಧದಲ್ಲಿ ಅವ್ಯವಸ್ಥೆಗಳನ್ನು ನಿರೂಪಿಸಿದ್ದರೆ ತಾವು ಉಪವಾಸ ಮಾಡುತ್ತೇವೆಂದು ತಮಗೆ ನೋಟೀಸ್ ಕೊಟ್ಟಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ನೋಟೀಸೇನೂ ಕೊಟ್ಟಿಲ್ಲ.

ಶ್ರೀ ವಿ. ಆರ್. ನಾಯ್ಡು.—ಆಸ್ಪತ್ರೆಗಳಲ್ಲಿ ಹಿಂದಿದ್ದ ದರಗಳನ್ನು ಜಾಸ್ತಿಮಾಡಿರುವುದು ಹಣದ ಅಭಾವದಿಂದಲ್ಲವೇ?

ಶ್ರೀ ಟಿ. ಚನ್ನಯ್ಯ.—ಹಿಂದಿದ್ದ ದರಕ್ಕಿಂತಲೂ ಈಗ ಸ್ವಲ್ಪ ದರ ಹೆಚ್ಚಿಸಿದ್ದೇವೆ. ಸ್ವಲ್ಪ ವ್ಯತ್ಯಾಸ ಹೆಚ್ಚಲೆ ಎಂದು.

ಶ್ರೀ ಎ. ಭೀಮಪ್ಪನಾಯಕ್.—ಡಿಸ್ಟ್ರಿಕ್ಟ್ ಮತ್ತು ಸಿಟಿ ಪ್ರದೇಶಗಳಲ್ಲಿ ಆಸ್ಪತ್ರೆಗಳಲ್ಲಿ admission fee ಯನ್ನು in-patient ಗಳಿಗೆ ವಜಾ ಮಾಡಿದೆಯೆಂದು ಹೇಳಿದಿರಿ. Has it been waived?

ಶ್ರೀ ಟಿ. ಚನ್ನಯ್ಯ.—Yes.

ಶ್ರೀ ಎ. ಭೀಮಪ್ಪನಾಯಕ್.—ಇದುವರೆಗೂ ಯಾವ ವಿಧವಾದ ಆರ್ಡರೂ ಆ ರೀತಿ ಬಂದಿಲ್ಲವೆಂದು ಅವರು ಹೇಳುತ್ತಾರೆ. ತಾವು ಇಲ್ಲಿ 'Yes' ಎಂದು ಹೇಳುತ್ತೀರಿ. ತಾವು ದಯವಿಟ್ಟು ತಮ್ಮ ಆರ್ಡರಿನಲ್ಲಿ ಇದು ಖಚಿತವಾಗಿದೆಯೇ ನೋಡಿ ಹೇಳೋಣವಾಗಲಿ.

ಶ್ರೀ ಟಿ. ಚನ್ನಯ್ಯ.—ವಜಾ ಆಗಿದೆ.

ಶ್ರೀ ಎ. ಭೀಮಪ್ಪನಾಯಕ್.—ಆ ಆರ್ಡರ್ ಎಲ್ಲಿದೆ? ಆ ಆರ್ಡರನ್ನು ಡಿಸ್ಟ್ರಿಕ್ಟ್ ಮತ್ತು ಸಿಟಿಗಳಲ್ಲಿ ಜಾರಿಗೆ ಕೊಟ್ಟಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚೆನ್ನಯ್ಯ.—ಜಾರಿಗೆ ಕೊಟ್ಟಿದ್ದೇನೆ.

ಶ್ರೀ ಎ. ಭೀಮಪ್ಪನಾಯಕ್.—ಹಾಗಿದ್ದರೆ, ಈಗಲೂ ಫೀಜನ್ನು ವಸೂಲುಮಾಡುತ್ತಿದ್ದರೆ ಏಕೆ ವಸೂಲು ಮಾಡುತ್ತಿದ್ದೀರೆಂದು ವಿಚಾರ ಮಾಡುತ್ತೀರಾ?

ಶ್ರೀ ಟಿ. ಚೆನ್ನಯ್ಯ.—ವಿಚಾರಮಾಡುತ್ತೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ಆಸ್ಪತ್ರೆಯಲ್ಲಿ ಬ್ರೆಡ್ಡು, ಹಾಲು ಮುಂತಾದುವುಗಳನ್ನು ಕೊಡುತ್ತಿದ್ದ quantum ಈಚೆಗೆ ಕಡಮೆಯಾಗಿಲ್ಲವೆ?

ಶ್ರೀ ಟಿ. ಚನ್ನಯ್ಯ.—Basic diet ಏನೆಂಬುದನ್ನು ನಿಗದಿಪಡಿಸಿದ್ದಾರೋ ಅಷ್ಟನ್ನು ಕೊಡುತ್ತಿದ್ದೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹಿಂದೆ ಎಷ್ಟು ಕೊಡುತ್ತಿತ್ತೋ ಅದನ್ನು ಈಚೆಗೆ ಕಡಮೆಮಾಡಲಾಗಿದೆಯೇ? ಈಗ ಅಷ್ಟು ಕೊಡುತ್ತಿಲ್ಲ, ಅಲ್ಲವೇ?

ಶ್ರೀ ಟಿ. ಚನ್ನಯ್ಯ.—ಡಾಕ್ಟರುಗಳು ಎಷ್ಟು ಕ್ಯಾಲರಿಗಳ ಆಹಾರಬೇಕೆಂದು ಗೊತ್ತುಮಾಡಿ, ಅದರಂತೆ ಆಯಾ ರೋಗಿಗಳ ಸ್ಥಿತಿಯನ್ನು ನೋಡಿಕೊಂಡು ಕೊಡುತ್ತಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮದ್ರಾಸ್ ಸ್ಯಾನಿಟೋರಿಯಮ್ಮಿನಲ್ಲಿ ಈ ರೀತಿ ರೇಷನ್ ಕಡಿಮೆ ಮಾಡಿಲ್ಲ ಅಲ್ಲವೇ?

Sri T. CHANNIAH.—Government have no information.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಅದನ್ನು ನೋಡಿ ಇಲ್ಲಿ ಆ ರೀತಿಯೇನಾದರೂ ಕಡಮೆಯಾಗಿದ್ದರೆ ಅದನ್ನು ಸರಿಪಡಿಸುತ್ತೀರಾ ?

Sri T. CHANNIAH.—I will enquire.

ಶ್ರೀ ಬಿ. ರಾಚಯ್ಯ.—ಆಸ್ಪತ್ರೆಗಳಲ್ಲಿ ಕಂಟ್ರಾಕ್ಟರು ಗಳು ಪದಾರ್ಥಗಳನ್ನು ಸರಬರಾಯಿ ಮಾಡುವುದರಲ್ಲಿ ತಮ್ಮ 'Quotation' ನಲ್ಲಿ ಎಷ್ಟು ಪ್ರಮಾಣದಲ್ಲಿ ದೆಯೋ ಅಷ್ಟು ಕೊಡದೆ ಕಡಿಮೆ ಕೊಡುತ್ತಾರೆಂಬುದು ತಮಗೆ ಗೊತ್ತಿದೆಯೇ ?

ಶ್ರೀ ಟಿ. ಚನ್ನಯ್ಯ.—ಈ ಪ್ರಶ್ನೆಗೆ ಅದು ಸಂಬಂಧ ಪಟ್ಟಿಲ್ಲ.

Improvement of Krishnarajanagar Taluk.

Q.—495. Sri S. H. THAMMIAH *alias* HANUMANTHEGOWDARA THAMMIAH (Krishnarajanagar).—

Will the Government be pleased to state :—

(*a*) the amount allotted in the State Budget for the year 1952-53 towards the improvement of Krishnarajanagar Taluk ;

(*b*) the amount spent on each item ;

(*c*) the number of works that were not executed ?

A.—Sri KADIDAL MANJAPPA (Minister for Revenue and Public Works).—

(*a*)	Rs.
Irrigation works ..	2,22,000
Roads and Buildings and Bridges ..	1,39,000
Rural Development Works :—	
Rural Water supply ..	8,365
Rural Communications ..	4,863
Rural Health and Sanitation	420
Deposit Contribution Works	1,372
(*b*)	
Irrigation works ..	1,91,508
Roads and Buildings ..	32,408
Rural Water Supply ..	3,087
Rural Communications ..	98
Rural Health and Sanitation	1,658

(*c*) The following works under the Revenue Department are not executed for want of funds :—

Rural Water Supply ..	30 works
Rural Communications ..	6 works
Rural Health and Sanitation	1 work

ಶ್ರೀ ಎಸ್. ಎಚ್. ತಮ್ಮಯ್ಯ.—ಇಲ್ಲಿ ಕೆಲವು ಕೆಲಸ ಗಳು ಪೂರೈಸದೆ ಹಾಗೆಯೇ ನಿಂತಿವೆಯೆಂದು ಹೇಳಿ ದ್ದೀರಿ. ಅವುಗಳನ್ನು ಹಾಗೆಯೇ ನಿಲ್ಲಿಸಿಬಿಡುತ್ತೀರಾ ಅಥವಾ ಮುಂದುವರಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಬೇಕೆಂದೇ ಸರ್ಕಾರದವರ ಉದ್ದೇಶ.

ಶ್ರೀ ಎಸ್. ಎಚ್. ತಮ್ಮಯ್ಯ.—ಇನ್ನು ಎಷ್ಟು ದಿವಸಗಳಲ್ಲಿ ಮಾಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—1953-54ರಲ್ಲಿ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.

ಶ್ರೀ ಎಸ್. ಎಂ. ಮರಿಯಪ್ಪ.—ಈ ಸಾರಿ ನಿರಾವರಿ ಕಾಮಗಾರಿಗಳಿಗಾಗಿ 2,22,000 ರೂಪಾಯಿಗಳನ್ನು ಈ ತಾಲ್ಲೂಕಿನಲ್ಲಿ ಖರ್ಚುಮಾಡಿದ್ದೀರೆಂದು ಹೇಳಿದ್ದೀರಿ. ಆದರೆ ಫಸಲಿಗೆ ಪೂರ್ತಾ ನೀರು ಸಿಕ್ಕಲಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

Mr. SPEAKER.—We are concerned with the works.

12-30 P.M.

Restoration of Sindhughatta Doddakere, Krishnarajapet Taluk.

Q.—502. Sri S. M. LINGAPPA (Krishnarajapet).—

Will the Government be pleased to state :—

(*a*) whether the villagers of Sindhughatta in Krishnarajapet Taluk have requested Government to restore the Doddakere tank belonging to their village ;

(*b*) if so, the steps undertaken by Government ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) An estimate amounting to Rs. 7,000 for effecting repairs to Sindhughatta major tank is got up and sent to the Deputy Commissioner, Mandya District, for his countersignature and to meet the cost under the "charges recoverable from raiyats" as the work is of a maintenance